ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ**

# ಸಿ. ಸಿ. ನಂ. 1022/2021

ಪಿರ್ಯಾದಿಃ ಶ್ರೀ ಕದನೂರು ಭಗವತಿ ದೇವಸ್ಥಾನ,
ಪ್ರತಿನಿಧಿಸುವವರು ಹಾಲಿ ಅಧ್ಯಕ್ಷರು,
ಶ್ರೀ ಅಮ್ಮಣಿಚಂಡ ರವಿ ಉತ್ತಪ್ಪ, ತಂದೆಃ ಪೌತಿ ನಾಣಯ್ಯ, 67 ವರ್ಷ,
ಮತ್ತು ಹಾಲಿ ಕಾರ್ಯದರ್ಶಿ, ತಂದೆಃಪೌತಿ ಕುಶಾಲಪ್ಪ,
ಶ್ರೀ ಪೆಮ್ಮಂಡ ಪ್ರಸಾದ್ ,67 ವರ್ಷ,
ವಾಸಃ ಕದನೂರು ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

(ಶ್ರೀ ಸಿ.ಕೆ ಪೂವಯ್ಯ ವಕೀಲರು,ವಿರಾಜಪೇಟೆ.)

***ವಿರುದ್ಧ***

ಆರೋಪಿಃ ಶ್ರೀ ಕಾಳಮಂಡ ಬೇಬಿ ಚೆಂಗಪ್ಪ, ತಂದೆಃ ತಿಮ್ಮಯ್ಯ,49 ವರ್ಷ,
ವಾಸಃಕದನೂರು ಗ್ರಾಮ ಮತ್ತು ಅಂಚೆ,
ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

(ಶ್ರೀ ಬಿ.ಎಸ್ ಸುಬ್ಬಯ್ಯ, ವಕೀಲರು, ವಿರಾಜಪೇಟೆ)

**::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::**

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ 1 ಶ್ರೀ ಅಮ್ಮಣಿಚಂಡ ರವಿ ಉತ್ತಪ್ಪ, ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ಶ್ರೀಕಾಳಮಂಡ ಬೇಬಿ ಚೆಂಗಪ್ಪ ರವರು ಕದನೂರು ಭಗವತಿ ದೇವಸ್ಥಾನದ ಮಾಜಿ ಅಧ್ಯಕ್ಷರಾಗಿದ್ದು, ದೇವಾಲಯದ ಅಭಿವೃದ್ಧಿ ಉಸ್ತುವಾರಿ ಹಾಗೂ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುತ್ತಿದುದ,

ಗ್ರಾಮಸ್ಥರೆಲ್ಲರೂ ಹಿಂದಿನ ಹಣಕಾಸು ಲೆಕ್ಕಪತ್ರದ ತಖ್ತೆಯನ್ನು ನೀಡುವಂತೆ ಕೇಳಿದಾಗ ರೂ.10,46,079/- ಹಣ ಕಡಿಮೆ ಕಂಡು ಬಂದಿದ್ದು, ಸದರಿ ಹಣವನ್ನು ಪಾವತಿಸುವ ಸಲುವಾಗಿ ಆರೋಪಿ ಮತ್ತು ಮಾಜಿ ಕಾರ್ಯದರ್ಶಿ ಒಪ್ಪಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ 1 ರವರು ಮುಂದುವರೆದು, ಸದರಿ ಹಣವನ್ನು ಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ಚೆಕ್ ನಂಬರ್ 087460 ರೂ.2,96,079/-ಗಳನ್ನು ನಮೂದಿಸಿ, ದಿನಾಂಕ 10.05.2021ರಂದು ಸದರಿ ಸಾಲವನ್ನು ತೀರಿಸುವ ಸಲುವಾಗಿ ಕಾರ್ಪೊರೇಷನ್ ಬ್ಯಾಂಕ್/ಯೂನಿಯನ್ ಬ್ಯಾಂಕ್,ವಿರಾಜಪೇಟೆ ಶಾಖೆಯ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್ ನೀಡಿದ್ದು, ಅದನ್ನು ನಗದೀಕರಿಸಿಕೊಂಡು ಹಣವನ್ನು ಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 4 ಫ್ರಾಸಾ 1 ರವರು ಮುಂದುವರೆದು, ನಿಮ್ಮ ಕೋರಿಕೆಯ ಮೇರೆಗೆ ಸದರಿ ಚೆಕ್‌ನ್ನು ಪಟ್ಟಣ ಸಹಕಾರ ಬ್ಯಾಂಕ್, ವಿರಾಜಪೇಟೆ ಮುಖಾಂತರ ನಗದೀಕರಿಸಲು ಸಲ್ಲಿಸಿದರೆ ಆದರೆ ಆರೋಪಿಯ ಬ್ಯಾಂಕ್ ನವರು "Funds Insufficient and signature defers, instrument not in usage" ಎಂಬ ಕಾರಣ ನೀಡಿ ಚೆಕ್‌ನ್ನು ಅಮಾನ್ಯಗೊಳಿಸಿ ದಿನಾಂಕಃ 03.06.2021ರ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 11.06.2021 ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್‌ನಲ್ಲಿನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ

ಆರೋಪಿಯು ಚೆಕ್‌ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್‌ನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿ-1 ರಿಂದ ನಿಪಿ-6 ನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 7 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 8 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆಃ 9 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿಃ

(ಸಂತೋಷ ಕೊಠಾರಿ )

ದಿನಾಂಕಃ 31.12.2024.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ವಿರಾಜಪೇಟೆ.